**Code No. 32 Y**

ನೋಂದಣಿ ಸಂಖ್ಯೆ
*Register Number*

## ಮುದ್ರಣ ಪರೀಕ್ಷೆ
## PRINTING EXAMINATION
## ಕರಡು ಪ್ರತಿ ತಿದ್ದುವ ಕೆಲಸ — ಪ್ರಥಮ ದರ್ಜೆ
### ಪತ್ರಿಕೆ – II (ಪ್ರಾಯೋಗಿಕ)
# PROOF-READER'S WORK — JUNIOR GRADE
## Paper – II ( Practical )

( Kannada & English Versions )

ಜನವರಿ, 2018 ] [ ಸಮಯ : 3 ಗಂಟೆಗಳು

[ ಗರಿಷ್ಠಾಂಕ : 40

***ಸೂಚನೆಗಳು :*** i) ನಿಮಗೆ ನೀಡಿರುವ ಪ್ರಶ್ನೆ ಪತ್ರಿಕೆಯಲ್ಲಿ ನಿಮ್ಮ ನೋಂದಣಿ ಸಂಖ್ಯೆಯನ್ನು ನಿಗದಿತ ಚೌಕಟ್ಟಿನಲ್ಲಿ ಬರೆಯಿರಿ.

Write your Register Number in the given box in your question paper.

ii) ಪ್ರಶ್ನೆ ಪತ್ರಿಕೆಯಲ್ಲಿ ಕೊಟ್ಟಿರುವ ಕರಡು ಪ್ರತಿಯನ್ನು ತಿದ್ದುಪಡಿ ಮಾಡಿದ ನಂತರ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಯನ್ನು ಹಿಂತಿರುಗಿಸಿ.

Return the answer sheet and corrected proof of the question paper.

iii) ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ.

Answer *all* the questions.

1. ಕರಡು ತಿದ್ದುವ ಹತ್ತು ಚಿಹ್ನೆಗಳನ್ನು ಹಾಗೂ ಅದರ ಅರ್ಥದೊಂದಿಗೆ ವಿವರಿಸಿ.

   Write and explain 10 Proof-reading marks with their meaning. 10

2. ಪುಟ ಸಂಖ್ಯೆ 2 ರಲ್ಲಿ ಕೊಟ್ಟಿರುವ ಕನ್ನಡ ಭಾಷೆಯ ಕರಡು ಪ್ರತಿಯಲ್ಲಿ ಸರಿಯಾದ ಚಿಹ್ನೆಗಳನ್ನು ಉಪಯೋಗಿಸಿ ತಿದ್ದಿ.

   Correct the draft of Kannada matters given on Page 2 by using appropriate proof-reading marks. 30

[ Turn over

# ಹುತಾತ್ಮ ಬಾಲಕ

ಭಾರತ ಮಾತೆಯ ಬಿಡುಗಡೆಗಾಗಿ ಬ್ರಿಟೀಷರ ವಿರುದ್ಧ ಹೋರಾಟ ಮಾಡಿ ಅನೇಕ ಜನ ಪ್ರಾಣಾರ್ಪಣೆ ಮಾಡಿದ್ದಾರೆ. ಅಂತಹ ಮಹಾನ್ ತ್ಯಾಗ ಮಾಡಿದವರಲ್ಲಿ ಹಬ್ಬಳ್ಳಿಯ ಲ್ಯಾಮಿಂಗ್‌ಟನ್ ಪ್ರೌಢಶಾಲೆಯ ಹದಿಮೂರು ವರ್ಷದ ವಿದ್ಯಾರ್ಥಿ ನಾರಾಯಣ ಮಹಾದೇವ ದೋನಿಯು ಒಬ್ಬ.

೧೯೪೨ರ ಆಗಸ್ಟ್ ೮ ರಂದು ಗಾಂಧೀಜಿಯವರು ಬಿಟೀಷರಿಗೆ ಭಾರತವನ್ನು ಬಿಟ್ಟು ತೊಲಗುವಂತೆ ಅಂತಿಮ ಎಚ್ಚರಿಕೆಯನ್ನು ಕೊಟ್ಟಿದ್ದರು. ಇಡೀ ದೇಶವು ಬ್ರಿಟೀಷರ ನಿರಂಕುಶ ಆಡಳಿತದ ವಿರುದ್ಧ ಕುದಿಯುವ ಜ್ವಾಲಾಮುಖಿಯಂತೆ ಸಿಡಿದೆದ್ದಿತ್ತು. ಬ್ರಿಟೀಷರು ಗಾಂಧಿ ಜಿಯವರ ಅಹಿಂಸೆಯ ತತ್ವವನ್ನು ಹೇಡಿತ ನವೆಂದು ತಪ್ಪಾಗಿ ತಿಳಿದಿದ್ದರು.

೧೯೪೨ ಆಗಸ್ಟ್ ೧೫ ಹುಬ್ಬಳ್ಳಿಯ ಜನತೆಗೆ ಒಂದು ಅತ್ಯಂತ ಪ್ರಮುಖ ದಿನವಾಗಿತ್ತು. ನಗರದ ಉದ್ದಗಲಕ್ಕೂ ಸ್ವಾತಂತ್ರ್ಯ ಹೋರಾಟಗಾರರ ಮೆರವಣಿಗೆಗೆ ಸಿದ್ಧತೆ ನಡೆದಿತ್ತು. ಭಾರತವನ್ನು ಬಿಟ್ಟು ತೊಲಗಿ" ಎಂಬ ಘೋಷಣೆಗಳ ಫಲಕಗಳು ಎಲ್ಲರ ಕೈಯಲ್ಲಿದ್ದವು. ಸಾಮರಸ್ಯದ ಮಂತ್ರ 'ವಂದೇ ಮಾತರಂ ಎಲ್ಲರ ಬಾಯಲ್ಲೂ ಹರಿದಾಡುತ್ತಿತ್ತು. 'ಭಾರತ ಮಾತಾಕಿ ಜೈ 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ,' 'ಚಲೇಜಾವ್' ಘೋಷಣೆಗಳೊಂದಿಗೆ ಸಾವಿರಾರು ಜನರು ಹುಬ್ಬಳ್ಳಿಯ ಹೃದಯ ಭಾಗದಂತಿರುವ ದುರ್ಗದಬಯಲು ಚೌಕದಲ್ಲಿ ಸೇರಿದ್ದರು.

ಬಾಲಕ ನಾರಾಯಣ ಅಂದು ಮು ಜಾನೆ ಬೇಗನೇ ಎದ್ದು ಸ್ನಾನ ಮಾಡಿ ಕೈಯಲ್ಲೇ ನೆಯ್ದ ಖಾದಿ ಚಡ್ಡಿ, ಅಂಗಿ ಮತ್ತು ಗಾಂಧಿ ಟೋಪಿಯನ್ನು ಧರಿಸಿದ. ಮನೆಯ ಬೀರುವಿನಲ್ಲಿದ್ದ ತ್ರಿವಣಧ್ವಜವನ್ನು ಹೊರತೆಗೆದ. ಬೊಂಬಿಗೆ ಧ್ವಜವನ್ನು ಕಟ್ಟಿ ಅಮ್ಮಾ" ಎಂದು ಜೋರಾಗಿ ಕೂಗಿದ. ನಿದೆ ಯಿಂದ ಎದ್ದ ತಾಯಿ ಮಗನನ್ನು ನೋಡಿ ಆಶ್ಚಯದಿಂದ "ಎಲ್ಲಿಗೆ ಹೋಗುತ್ತಿರುವೆ ಮಗ?"ಎಂದು ಕೇಳಿದಳು.

"ಅಮ್ಮಾ ಬ್ರಿಟೀಷರ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಯುತ್ತಿದೆ. ಅದನ್ನು ಕೂಡಿಕೊಳ್ಳಲು ನಾನು ಹೋಗುತ್ತಿದ್ದೇನೆ" ಎಂದ ನಾರಾಯಣ. ಬಾಲಕ ನಾರಾಯಣನ ಕಣ್ಣಿನಲ್ಲಿ ಅಪೂರ್ವ ಕಾಂತಿಯಿತ್ತು. "ಮಗು ನೀನು ಇನ್ನೂ ಕಿರಿಯವ. ದೊಡ ್ಡವರ ಮೆರವಣಿಗೆಯಲ್ಲಿ ನೀನು ಹೇಗೆ ಸೇರಲು ಸಾಧ?" ಎಂದು ದುಗು ಡದಿಂದ ತಾಯಿ ಕೇಳಿದಳು.

ಅದಕ್ಕೆ ಅವನು ಅಮ್ಮ ಹಿರಿಯರು ಮತ್ತು ಕಿರಿಯರು ಎನ್ನುವುದು ಮುಖ್ಯವಲ್ಲ. ಭಾರತ ಮಾತೆಯ ಸೇವೆಯನ್ನು ಹೇಗೆ ಮಾಡುತ್ತೇವೆ ಎನ್ನುವುದೇ ಮುಖ್ಯ" ಮಗನ ಈ ರೀತಿಯ ಮಾತುಗಳನ್ನು ಕೇಳಿ ತಾಯಿ ಅಚ್ಚರಿ ಗೊಂಡಳು. ಅವನ ಹಣೆಗೆ ಪ್ರೀತಿಯಿಂದ ಮುತಿಟ್ಟು "ದೇವರು ನನಗೆ ಒಳ್ಳೆಯದನ್ನು ಮಾಡಲಿ" ಎಂದು ಹರಸಿ ಕಳುಹಿಸಿಕೊಟ್ಟಳು.